ನೇರವಾಗಿ ನುಗ್ಗಿವೆ. ತಮ್ಮ ಸ್ಥಳೀಯತೆಗಳ ಗರ್ಭಕ್ಕೆ ಒಗ್ಗುವ ಹಾಗೆ ಇಲ್ಲಿನ ವಸ್ತು ಮತ್ತು ವಿನ್ಯಾಸಗಳು ಜಾಗ ಪಡೆದಿವೆ. ಅಲ್ಲದೆ, ಆರಂಭದ ಆಧುನಿಕತೆ ಇಲ್ಲಿ ಮನುಷ್ಯನ ಜೀವಿತ ಕ್ರಮಗಳಿಗೆ ಎಡತಾಕಿದೆ. ದಕ್ಷಿಣ ಮತ್ತು ಉತ್ತರಕನ್ನಡದ ಕಥೆಗಾರರ ಕಲಾತ್ಮಕತೆ, ಸೂಕ್ಷ್ಮಜೀವನದೃಷ್ಟಿ, ರೂಪಕಾತ್ಮಕ ಭಾಷೆಯ ಬಳಕೆ ಇವೆಲ್ಲವೂ ಅವರ ತಾತ್ವಿಕತೆಯನ್ನು ಬಲವಾಗಿ ಹಿಗ್ಗಿಸಿವೆ. ಈ ದೃಷ್ಟಿಯಿಂದ ಮಾಸ್ತಿಯವರನ್ನು ಕೊಂಚ ಮಟ್ಟಿಗೆ ಮೀರಿಸುತ್ತಾರೆ. ಈ ಗುಣಗಳು ವಸಾಹತುವಿನ ಗುಣಗಳಿಂದ ನೇರವಾಗಿ ಬಂದಿವೆ ಎಂದರೂ ಅರ್ಧಸತ್ಯವಾಗುತ್ತದೆ. ಅವರ ಜೀವನನುಭವಗಳ ಒಳಶಕ್ತಿಗಳು ಇರಬಲ್ಲವು. ಯಾವುದೇ ಲೇಖಕ ಕೊನೆತನಕ ಕೇವಲ ಅನ್ಯ ಪ್ರಭಾವಗಳಿಂದ ತನ್ನ ಲೋಕದೃಷ್ಟಿ ರೂಪಿಸಿಕೊಳ್ಳಲು ಅಸಾಧ್ಯ. ಆ ದಾರಿ ಹಿಡಿದರೆ ಆತ ಕೇವಲ ಗಸಿಯಾಗಿ ಉಳಿಯುತ್ತಾನೆ. ಮೇಲಿನ ಕಥೆಗಾರರು ಸ್ಥಳೀಯತೆಯ ಗಂಭೀರ ನೋಟಕ್ರಮಗಳು ಹಾಗು ಜೀವನದರ್ಶನಗಳ ಉತ್ಕಟತೆಯಿಂದ ಇಂದಿಗೂ ತಮ್ಮ ಕಥೆಗಳನ್ನು ಬಿಟ್ಟುಹೋಗಿದ್ದಾರೆ. ಇವರೆಲ್ಲರೂ ಬಹುತೇಕ ವೈದಿಕರಾದರೂ, ಮಾಸ್ತಿಯವರ ಮೌಲ್ಯಗಳ ಸಂಪ್ರದಾಯಗಳಿಗಿಂತ ಬೇರೊಂದು ಸ್ವರೂಪವನ್ನು ಪಡೆದುಕೊಂಡುಬಿಡುತ್ತವೆ. ಸಮಗ್ರವಾಗಿ ಕಥೆಗಳು ಸಂಪ್ರದಾಯದ ಚೌಕಟ್ಟುಗಳನ್ನು ಮೀರದೇ ಇದ್ದರೂ ಅಲ್ಲಲ್ಲಿ ಕಾಣುವ ಪ್ರಯೋಗಶೀಲತೆ, ಮನುಷ್ಯನ ಸಂಘರ್ಷಗಳು, ವೈದಿಕ ಹೆಣ್ಣು ಮಕ್ಕಳ ಒಳರೋದನಗಳು, ಅದರಲ್ಲೂ ಚಿಕ್ಕವಯಸ್ಸಿನ ವಿಧವೆಯರ ಪಾಡುಗಳು ಹೆಚ್ಚು ಮುಕ್ತವಾಗಲ್ಲದಿದ್ದರೂ ವಾಸ್ತವವಾಗಿ ಚಿತ್ರಿಸಬಲ್ಲರು. ಈ ಬಗೆಯ ಆಶಯಗಳು ಮಾಸ್ತಿಯವರಲ್ಲಿ ವಿಶಾಲನೆಲೆಯಲ್ಲಿ ಮತ್ತು ಮಾದರಿ ರೂಪದಲ್ಲಿ ಬಂದಿಲ್ಲ. ಆಧುನಿಕತೆ ಮತ್ತು ಸ್ಥಳೀಯತೆಯ ಮುಖಾಮುಖಿ ಈ ಭಾಗದ ಲೇಖಕರಲ್ಲಿ ಗಂಭೀರವಾಗಿ ಕಾಣಿಸಿಕೊಳ್ಳುತ್ತವೆ. ಇವುಗಳಿಗೆ ಜೋಡಿಸುವ ಜೀವನನುಭವಗಳಿಂದ ಅವರು ಭಿನ್ನವಾಗುತ್ತಾರೆ. ಇದಕ್ಕೆ ಉತ್ತಮ ನಿದರ್ಶನ, ಪಂಜೆಯವರ 'ಕಮಲಾಪುರ ಹೋಟ್ಲಿನಲ್ಲಿ' ಕಥೆಯನ್ನು ನೋಡಬಹುದು.

ಪಂಜೆ ಮತ್ತು ಪಡುಕೋಣೆ ಅವರನ್ನು ಕೇವಲ ಹಾಸ್ಯದ ಆವರಣದಲ್ಲಿ ಕಂಡರೆ ಸೂಕ್ಷ್ಮ ಒಳನೋಟಗಳು ಸಿಗಲಾರವು. 'ಕಮಲಾಪುರದ ಹೋಟ್ಲಿನಲ್ಲಿ' ಮತ್ತು 'ನನ್ನ ಚಿಕ್ಕತಂದೆಯ ಉಯಿಲ್' (ಪಂಜೆ) ಎರಡೂ ಕಥೆಗಳು ಕೇವಲ ಹಾಸ್ಯವನ್ನು ಮಾತ್ರ ಉಸುರುವುದಿಲ್ಲ. ಆ ಕಾಲಮಾನದಲ್ಲಿ ಆಧುನಿಕತೆ ಸ್ವ ಜೀವಿತಕ್ರಮದೊಳಗಡೆ ಸೂಕ್ಷ್ಮವಾಗಿ ಕಾಣಿಸಿಕೊಂಡ ಬಗೆಯೂ ಅಲ್ಲಿದೆ. ಮಾತ್ರವಲ್ಲ, 'ಹೋಟೆಲ್' ಒಂದು ರೂಪಕವಾಗಿ ಬರುತ್ತೆ. ಇದು ಹಲವು ಊರುಗಳ ಸಂಧೀ ಜಾಗವಾಗಿ, ಹಲವು ಜನರು ಕೂಡುವ, ಮಾತಾಡುವ ಹಾಗು ಭಿನ್ನ ಮನಸ್ಥಿತಿಗಳ ಸ್ಥಳವೂ ಆಗಿದೆ. ಇದನ್ನು ಬಹಳ ಎಚ್ಚರದಿಂದ ಪಂಜೆ ತರುತ್ತಾರೆ. 'ನನ್ನ ಚಿಕ್ಕ ತಂದೆಯ ಉಯಿಲ್' ಕಥೆ ಬಹುಶಃ ಪ್ಲೇಗ್ ರೋಗವನ್ನು ಮೊದಲ ಬಾರಿಗೆ ಕಥನ ಕ್ರಮದಲ್ಲಿ ಚಿತ್ರಿಸಿದೆ. ನವೋದಯ, ನವ್ಯದ ಮಾನದಂಡಗಳನ್ನು ಆಗಲೇ ಅರಗಿಸಿಕೊಂಡ ಕಥೆಯಿದು. ಪಂಜೆಯವರು ಏಕಕಾಲಕ್ಕೆ ಮನುಷ್ಯನ ಏಕಾಂಗಿತನ, ದುಷ್ಟತನ, ಸ್ವಾರ್ಥ, ಮಾನವೀಯತೆ, ದುರಾಸೆಗಳನ್ನು ಚಿತ್ರಿಸುತ್ತಲೇ, ಪ್ಲೇಗ್ ರೋಗ ಊರನ್ನು ಮತ್ತು ಮನುಷ್ಯರನ್ನು ಅಲ್ಲಾಡಿಸಿದ ಬಗೆಯನ್ನೂ ಅಭಿವ್ಯಕ್ತಿಸಬಲ್ಲರು. ಮಡಿವಂತ ವೈದಿಕತೆಯನ್ನು ಈ ಭಾಗದ ಲೇಖಕರು ಬಹುತೇಕ ಒಪ್ಪುತ್ತಿರಲಿಲ್ಲ. ಜೀವನನುಭವಗಳನ್ನು ಕಲೆಯಲ್ಲಿ ಅಭಿವ್ಯಕ್ತಿಸುವಾಗ ವಾಸ್ತವ ರೂಪಗಳನ್ನು ಈ ಭಾಗದ ಲೇಖಕರು ಹೆಚ್ಚು ಮುಚ್ಚಿಡುವುದಿಲ್ಲ. ಸ್ವತಃ ಲಂಕೇಶ ಕೂಡ ನವೋದಯದ ಮಾಸ್ತಿ ಮತ್ತು ಇನ್ನಿತರ ಕೆಲ ಕಥೆಗಾರರನ್ನು ಬಿಟ್ಟರೆ ವಿಶಾಲವಾಗಿ ಮೇಲಿನ ಕಥೆಗಾರರನ್ನು ಹೆಚ್ಚು ಚರ್ಚೆಗೆ ಎತ್ತಿಕೊಂಡಿಲ್ಲ. ಅವರ 'ಪ್ರಸ್ತುತ' ಗದ್ಯಬರಹಗಳ ಸಂಕಲನದಲ್ಲಿ ಸಣ್ಣಕಥೆಯ ಕುರಿತು ಎರಡು ಮಹತ್ವದ ಲೇಖನಗಳಿವೆ. ಒಂದು; 'ಸಣ್ಣಕತೆ: ಸತ್ವಶಾಲೀ ಯುವಜನ'. ಎರಡು; 'ಕಳೆದ ಇಪ್ಪತ್ತುವರ್ಷಗಳ ಸಣ್ಣಕತೆ: ಎರಡು ಘಟ್ಟಗಳು'. ಎರಡನೇ ಲೇಖನದಲ್ಲಿ ಅವರು, ಸ್ವಾತಂತ್ರ್ಯ ಬಂದ ಹೊಸದರಲ್ಲಿ ಬಂದ ಕಥೆಗಳು, ಮತ್ತು ಈಚಿನ ನವ್ಯಕಥೆಗಳು ಎಂದು ಕೇವಲ ಎರಡು ರೀತಿಯಲ್ಲಿ ಸಣ್ಣಕಥೆಗಳನ್ನು ಗುರುತಿಸುತ್ತಾರೆ. ಸ್ವಾತಂತ್ರ್ಯಪೂರ್ವದಲ್ಲಿ ಅವರು ಹೆಸರಿಸುವುದು ಕೇವಲ